# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

## C.C.No.1106/2023

| | | |
|---|---|---|
| **ಹೆಸರುಃ** | **ಗಣೇಶ್** | **CW**-2 |
| **ತಂದೆ/ಗಂಡ ಹೆಸರುಃ** | **ರಾಜೇಶ್** | **PW**-6 |
| **ವಯಸ್ಸುಃ** | **29 ವರ್ಷ** | |
| **ವೃತ್ತಿಃ** | **ವ್ಯವಸಾಯ** | |
| **ವಿಳಾಸಃ** | **ಯಸಳೂರು** | **ದಿನಾಂಕಃ 03-11-2025** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ದಿಃ **20.07.2023** ರಂದು ಚಾಸಾ-1, 3 ಮತ್ತು 4 ರವರ ಕೃಷಿ ಯಂತ್ರ ತರಲು ನಾವು ಬಾಡಿಗೆಗೆ ಪಡೆದ ಶೆಡ್ ಬಳಿ ಹೋಗಿರುತ್ತೇವೆ. ಆ ಸಮಯದಲ್ಲಿ 1 ಮತ್ತು 3 ನೇ ಆರೋಪಿ ನಮ್ಮನ್ನು ಕೂಡಿ ಹಾಕಿರುತ್ತಾರೆ. ಕಾರನ್ನು ತಂದು ಅಡ್ಡ ಓಡಿಸಿರುತ್ತಾರೆ. ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾರೆ. 4 ನೇ ಆರೋಪಿ ಗೇಟ್ ತೆಗೆಯಬೇಡಿ ಎಂದು ಹೇಳಿದ್ದರಿಂದ ಗೇಟ್ ತೆಗೆಯುವುದಿಲ್ಲ ಎಂದು ತಿಳಿಸಿರುತ್ತಾರೆ. ನಮ್ಮನ್ನು ಊರಿನಲ್ಲಿ ಇರಲು ಬಿಡುವುದಿಲ್ಲ ಎಂದು ತಿಳಿಸಿರುತ್ತಾರೆ. ಆರೋಪಿತರು ಅಡ್ಡಗಟ್ಟಿದ ಕಾರ ನಂಬರ್ ಕೆ ಎ 03 - 4158 ಇರುತ್ತದೆ. ಪೂರ್ಣ ನಂಬರ್ ನೆನಪಿಲ್ಲ. ನಾನು ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 3ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಈ ದಿನ 4 ನೇ ಆರೋಪಿ ಗೈರು ಹಾಜರಿದ್ದು ಅವರ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸಿರುತ್ತಾರೆ.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ ಸ ಅ ಅವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)***

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದ.**

ಸದರಿ ಕಾರ ನಂಬರ್ ಕೆ ಎ 03 ಎಲ್ ಇ 5814 ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎ ಎಸ್ ಎನ್ ವಕೀಲರಿಂದ**

ಆರೋಪಿತರು ನಮ್ಮ ಊರಿನವರು ಎಂದರೆ ಸರಿ. ಕೃಷಿ ಯಂತ್ರಗಳು ಇದ್ದ ಜಾಗ 4 ನೇ ಆರೋಪಿಯ ತಂದೆಗೆ ಸೇರಿದ ಜಾಗ ಎಂದರೆ ಸರಿ. ವರ್ಷ ಅಗ್ರಿ ಬಿಸಿನೆಸ್ ಫಾರ್ ಡೆವಲೇಪ ಮೆಂಟ್ ಲಿಮಿಟೆಡ್ , ಚಿತ್ರದುರ್ಗ ಶಾಖೆ ಗೆ ಸೇರಿದ ಯಂತ್ರೋಪಕರಣಗಳು ಎಂದರೆ ಸರಿ. ಸಾಕ್ಷಿ ಅವುಗಳನ್ನು ಚಾಸಾ 1 ರವರು ಬಾಡಿಗೆಗೆ ಪಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಶೆಡ್ ನಲ್ಲಿ ನಾವು ನಿಲ್ಲಿಸುತ್ತಿದ್ದೆವು ಯಾವಾಗ ಬೇಕು ಆಗ ತೆಗೆಯುತ್ತಿದ್ದೆವು ಎಂದು ನುಡಿಯುತ್ತಾರೆ. ಅದಕ್ಕೆ ಚಾಸಾ 4 ರವರ ಅನುಮತಿ ಬೇಕಾಗಿರುವುದಿಲ್ಲ ಎಂದು ನುಡಿಯುತ್ತಾರೆ.

ಬಾಡಿಗೆ ಕರಾರು ಪತ್ರ ಬೆಳಿಗ್ಗೆ 7.30 ರಿಂದ ಸಂಜೆ 5.30 ರ ವರೆಗೆ ಇರುತ್ತದೆ ಎಂದರೆ ಸರಿಯಲ್ಲ. 4 ನೇ ಆರೋಪಿಯ ತಂದೆ ಮತ್ತು ಕಂಪನಿಯ ಕರಾರಿನಂತೆ ಬೆಳಿಗ್ಗೆ 7.30 ರಿಂದ ಸಂಜೆ 5.00 ಗಂಟೆಯವರೆಗೆ ಮಾತ್ರ ಬಾಡಿಗೆ ಅವಕಾಶ ಇರುತ್ತದೆ ಎಂದರೆ ಸರಿಯಲ್ಲ. ನಾವು ಹೋದಾಗ ಸಂಜೆ 6.30 ಆಗಿತ್ತು. ಚಾಸಾ 1 ಮತ್ತು ಲಕ್ಷಣ ರವರ ವಿರುದ್ದ ಮರಳು ಪ್ರಕರಣದಲ್ಲಿ ಕ್ರಿಮಿನಲ್ ಕೇಸ್ ದಾಖಲಾಗಿತ್ತು ಎಂದರೆ ಗೊತ್ತಿಲ್ಲ. ನಾವು ದಿಃ 20.07.2023 ರಂದು ಘಟನಾ ಸ್ದಳದ ಬಳಿ ಹೋದಾಗ 4 ನೇ ಆರೋಪಿ ತಂದೆ ಮರಣ ಹೊಂದಿದ್ದರು ಎಂದರೆ ಸರಿ. ಸದರಿ ಘಟನಾ ಸ್ದಳದ ಆವರಣದಲ್ಲಿ 4 ನೇ ಆರೋಪಿ ಮತ್ತು ಅವರ ಮನೆಯರು ಇರಲಿಲ್ಲ ಎಂದರೆ ಸರಿ. ಯಾವುದೇ ವಾಹನ ಬಾಡಿಗೆ ಪಡೆಯಲು 4 ನೇ ಆರೋಪಿಯ ಮನೆಯವರಿಗೆ ತಿಳಿಸಿ ಹೋಗಬೇಕು ಎಂದರೆ ಸರಿಯಲ್ಲ. ಆರೋಪಿ ಮನೆಯ ಮತ್ತು ತೋಟದ ಸುತ್ತ ಬೇಲಿ ಇರುತ್ತದೆ ಎಂದರೆ ಸರಿ. ಯಂತ್ರೋಪಕರಣಗಳಿಗೆ ಪ್ರತ್ಯೇಕ ಶೆಡ್ ನಿರ್ಮಿಸಿರುತ್ತಾರೆ ಎಂದರೆ ಸರಿ.

1 ನೇ ಆರೋಪಿ ಮತ್ತು ನಮ್ಮ ವಿರುದ್ದ ಮನಸ್ತಾಪವಾಗಿ ಕೆಲವು ಪ್ರಕರಣಗಳು ದಾಖಲಾತಿದ್ದವು ಮತ್ತು ರಾಜಿ ಮಾಡಿಕೊಂಡಿರುತ್ತೆವೆ ಎಂದರೆ ಸರಿ. ಸ್ಥಳಕ್ಕೆ ನಾನು, ಚಾಸಾ 1 ಮತ್ತು ಚಾಸಾ 3 ರವರು ಹೋಗಿದ್ದೆವು. 4 ನೇ ಆರೋಪಿ ಮನೆಯಲ್ಲಿ ಯಾರು ಇಲ್ಲದೇ ಇದ್ದಾಗ ಇತರ ಆರೋಪಿತರು ಬಂದು ನಮ್ಮನ್ನು ಕೇಳಿದಾಗ ನಾವು ಅವರ ವಿರುದ್ದ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ಪಂಚನಾಮೆಗೆ ಮತ್ತು ಹೇಳಿಕೆಗೆ ನಾನು ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಕಾರನ್ನು ಅಡ್ಡಗಟ್ಟಿ ನಿಲ್ಲಿಸಿಲ್ಲ ಎಂದರೆ ಸರಿಯಲ್ಲ. ಅವ್ಯಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಯಾವುದೇ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ**
**ಸಕಲೇಶಪುರ**